ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ,ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು-09

ಸಂಖ್ಯೆ:ಸಿಎಸಿ-05/ಬಿ.ಇಡಿ.ದಾ./01/2022-23 ದಿನಾಂಕ:03-02-2023

## 2022-23ನೇ ಸಾಲಿನ ಬಿ.ಇಡಿ ಕೋರ್ಸಿನ ನಾಲ್ಕನೇ ಸುತ್ತಿನ ದಾಖಲಾತಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸೂಚನೆಗಳು

2022-23ನೇ ಸಾಲಿನ ಬಿ.ಇಡಿ ಕೋರ್ಸಿಗೆ ದಾಖಲಾತಿ ಬಯಸಿ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ನೀಡಿರುವ ಮಾಹಿತಿಯ ಆಧಾರದ ಮೇಲೆ ಮೆರಿಟ್, ಮೀಸಲಾತಿ ಮತ್ತು ಆದ್ಯತೆಯ ಅನ್ವಯ ಬಿ.ಇಡಿ ಸಂಸ್ಥೆ/ಕಾಲೇಜು ಹಂಚಿಕೆ ಸಹಿತ ಆಯ್ಕೆ ಪಟ್ಟಿ, ಅರ್ಹತಾ ಪಟ್ಟಿ ಮತ್ತು ತಿರಸ್ಕೃತ ಪಟ್ಟಿ ಹಾಗೂ ಅಭ್ಯರ್ಥಿಗಳ ರ್‍ಯಾಂಕ್ ಪಟ್ಟಿಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ದಿನಾಂಕ:06-01-2023 ರಂದು ಪ್ರಕಟಿಸಲಾಗಿತ್ತು.

**ದಿನಾಂಕ: 7-01-2023 ರಿಂದ 31-01-2023 ರವರೆಗೆ ನಡೆಸಲಾದ ಬಿ.ಇಡಿ ದಾಖಲಾತಿಯ ಮೂರು ಸುತ್ತಿನಲ್ಲಿ ಸೀಟು ಹಂಚಿಕೆ ಮತ್ತು ದಾಖಲಾತಿ ಪ್ರಕ್ರಿಯೆ ಮುಗಿದ ನಂತರ ಉಳಿದಿರುವ ಸೀಟುಗಳನ್ನು ಪರಿಗಣಿಸಿ, ನಾಲ್ಕನೇ ಸುತ್ತಿನ ದಾಖಲಾತಿ ಪ್ರಕ್ರಿಯೆಗಾಗಿ ಸಂಸ್ಥೆಯವಾರು ಪ್ರವರ್ಗವಾರು [Institution wise remaining seats (category wise)] Seat Matrix ಅನ್ನು ದಿನಾಂಕ:03-01-2023 ರಂದು ಇಲಾಖಾ ವೆಬ್‌ಸೈಟ್ https://schooleducation.kar.nic.inನಲ್ಲಿ ಪ್ರಕಟಿಸಲಾಗಿದೆ.**

### ನಾಲ್ಕನೇ ಸುತ್ತಿನ ದಾಖಲಾತಿಗೆ ಪರಿಗಣಿಸಲಾಗುವ ಅಭ್ಯರ್ಥಿಗಳು

1. 2022-23ನೇ ಸಾಲಿನಲ್ಲಿ ಬಿ.ಇಡಿ ಕೋರ್ಸಿನ ದಾಖಲಾತಿಗೆ ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿದ್ದ ಕೊನೆಯ ದಿನಾಂಕ:30-11-2022 ರೊಳಗೆ ಆನ್‌ಲೈನ್ ಅರ್ಜಿ ಸಲ್ಲಿಸಿದ್ದು, ನಿಗದಿತ ವಿದ್ಯಾರ್ಹತೆಯಾದ ಪದವಿ/ಸ್ನಾತಕ ಪದವಿಯ ಫಲಿತಾಂಶವು ಪ್ರಕಟವಾಗದೇ, ಈಗಾಗಲೇ ಸಲ್ಲಿಸಲಾದ ಆನ್‌ಲೈನ್ ಅರ್ಜಿಯಲ್ಲಿ ಪದವಿ/ಸ್ನಾತಕ ಪದವಿಯ ಅಪೂರ್ಣ ಅಂಕಗಳನ್ನು ನಮೂದಿಸಿದ ಅಭ್ಯರ್ಥಿಗಳು ದಿನಾಂಕ:30-11-2022ರ ನಂತರ ಫಲಿತಾಂಶ ಪ್ರಕಟಗೊಂಡಿರುವ ವಿದ್ಯಾರ್ಥಿಗಳ ವಿಶೇಷವಾಗಿ ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯ ಗುಲ್ಬರ್ಗಾ ವಿಶ್ವವಿದ್ಯಾಲಯದ ಶೈಕ್ಷಣಿಕ ಹಿತದೃಷ್ಠಿಯಿಂದ ಈಗಾಗಲೇ ನಿಗದಿತ ದಿನಾಂಕದೊಳಗೆ ಆನ್‌ಲೈನ್ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಮಾನ್ಯ **ಸರ್ಕಾರದ ಪತ್ರದ ಸಂಖ್ಯೆ: ಇಡಿ 35 ಯುಜಿಹೆಚ್ 2022 (ಇ), ಬೆಂಗಳೂರು ದಿನಾಂಕ:02-02-2023ರ ನಿರ್ದೇಶನದಂತೆ** ನಾಲ್ಕನೇ ಸುತ್ತಿನಿಂದ ಬಿ.ಇಡಿ ದಾಖಲಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

2. ಈ ಹಿನ್ನೆಲೆಯಲ್ಲಿ ಈಗಾಗಲೇ ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಫಲಿತಾಂಶ ಪ್ರಕಟವಾಗಿರುವ, ಪದವಿ/ಸ್ನಾತಕ ಪದವಿಯ ಅಂಕಗಳನ್ನು ಅಪೂರ್ಣವಾಗಿ ಭರ್ತಿಮಾಡಿರುವ ಅಭ್ಯರ್ಥಿಗಳು ಮಾತ್ರ ನಿಮ್ಮ User ID ಮತ್ತು Password ಮೂಲಕ

ಮತ್ತೊಮ್ಮೆ ಲಾಗಿನ್ ಆಗಿ ಆನ್‌ಲೈನ್ ಅರ್ಜಿಯಲ್ಲಿ ಪದವಿ/ಸ್ನಾತಕ ಪದವಿಯ ಅಂಕಗಳನ್ನು **ದಿನಾಂಕ:03-02-2023 ರಿಂದ 04-02-2023 ರೊಳಗಾಗಿ ಎಡಿಟ್ ಮಾಡಿಕೊಳ್ಳುವುದು.** ಆದರೆ ಈಗಾಗಲೇ ಸಲ್ಲಿಸಿರುವ ಅರ್ಜಿಯಲ್ಲಿ ನಮೂದಿಸದೇ ಈಗ ಹೊಸದಾಗಿ ಶೈಕ್ಷಣಿಕ ಅರ್ಹತೆಯ ಪದವಿಯನ್ನು ನಮೂದಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ನಿಗದಿತ ದಿನಾಂಕದೊಳಗೆ ತಮ್ಮ ಆನ್‌ಲೈನ್ ಅರ್ಜಿಯಲ್ಲಿ ಲಾಗಿನ್ ಆಗಿ ಅಪೂರ್ಣವಾಗಿ ಭರ್ತಿ ಮಾಡಿದ ಅಂಕಗಳನ್ನು ಇಂದೀಕರಿಸಿಕೊಳ್ಳದೇ ಅಥವಾ ಮತ್ತೊಮ್ಮೆ ತಪ್ಪಾಗಿ ನಮೂದಿಸಿದ ಅಭ್ಯರ್ಥಿಗಳಿಗೆ ಮತ್ತೊಮ್ಮೆ ಎಡಿಟ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದಿಲ್ಲ, ಇದಕ್ಕೆ ಅಭ್ಯರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ.

3. ದಿನಾಂಕ:24-01-2023 ರಂದು ಪ್ರಕಟಿಸಲಾದ ಸೀಟು ಹಂಚಿಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಹೊರತುಪಡಿಸಿ, ಅರ್ಹತಾ ಪಟ್ಟಿಯಲ್ಲಿ ಉಳಿದ ಅಭ್ಯರ್ಥಿಗಳಿಗೆ ಅಂದರೆ ದಿನಾಂಕ:06-01-2023 ರಂದು ಪ್ರಕಟಿಸಲಾದ ಅರ್ಹತಾ ಪಟ್ಟಿಯಲ್ಲಿದ್ದು, ಇದುವರೆವಿಗೂ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳಿಗೆ ನಾಲ್ಕನೇ ಸುತ್ತಿನ ದಾಖಲಾತಿಗೆ ಮಾತ್ರ ಅವಕಾಶ ಕಲ್ಪಿಸಿದೆ. ಈ ಅಭ್ಯರ್ಥಿಗಳಿಗೆ ಇದು ಅಂತಿಮ ಅವಕಾಶವಾಗಿರುತ್ತದೆ.
4. ದಿನಾಂಕ:06-01-2023 ರಂದು ಪ್ರಕಟಿಸಲಾದ ಆಯ್ಕೆಪಟ್ಟಿಯಲ್ಲಿದ್ದು, ಮೊದಲ, ಎರಡನೇ ಸೀಟು ಹಂಚಿಕೆಯಾಗಿ ಕಾಲೇಜು ಹಂಚಿಕೆಯಾಗದ ** ಎಂದು ಗುರುತು ನಮೂದಾಗಿದ್ದ ಅಭ್ಯರ್ಥಿಗಳಿಗೆ ಮೂರನೇ ಸುತ್ತಿನಲ್ಲಿ ಅವಕಾಶ ಕಲ್ಪಿಸಿದ್ದಾಗ್ಯೂ ಅಭ್ಯರ್ಥಿಗಳು ಕಡಿಮೆ ಸಂಖ್ಯೆಯ ಕಾಲೇಜುಗಳಿಗೆ ಆದ್ಯತೆ ನೀಡಿದ್ದರಿಂದ ಮೂರನೇ ಸುತ್ತಿನಲ್ಲಿಯೂ ಸೀಟು ಹಂಚಿಕೆಯಾಗದಿರುವ ಅಭ್ಯರ್ಥಿಗಳಿಗೆ ನಾಲ್ಕನೇ ಸುತ್ತಿಗೆ ಮಾತ್ರ ಅವಕಾಶ ಕಲ್ಪಿಸಿದೆ.

5. ದಿನಾಂಕ:24-01-2023ರಂದು ಪ್ರಕಟಿಸಲಾದ ಸೀಟುಹಂಚಿಕೆ ಪಟ್ಟಿಯಲ್ಲಿ ಸೀಟು ಹಂಚಿಕೆಯಾಗಿ ಕಾಲೇಜು ಹಂಚಿಕೆಯಾಗದೆ ** ಎಂದು ಗುರುತು ನಮೂದಾಗಿರುವ ಅಭ್ಯರ್ಥಿಗಳಿಗೂ (ಅರ್ಹತಾ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಮಾತ್ರ) ಸಹ ನಾಲ್ಕನೇ ಸುತ್ತಿಗೆ ಮಾತ್ರ ಪರಿಗಣಿಸಿ ಅವಕಾಶ ಕಲ್ಪಿಸಲಾಗಿದೆ.

6. ದಿನಾಂಕ:06-01-2023 ರಂದು ಪ್ರಕಟಿಸಲಾದ ಆಯ್ಕೆಪಟ್ಟಿಯಲ್ಲಿದ್ದು, ಮೊದಲ ಹಾಗೂ ಎರಡನೇ ಸುತ್ತಿನ ದಾಖಲಾತಿ ಪ್ರಕ್ರಿಯೆಗೆ ಕಾಲೇಜು ಸಹಿತ ಸೀಟು ಹಂಚಿಕೆ ಪಟ್ಟಿಯಲ್ಲಿದ್ದ ಕೆಲವು ಅಭ್ಯರ್ಥಿಗಳು ಅನಾರೋಗ್ಯ ಅಥವಾ ಇನ್ನಿತರೆ ಅನಿವಾರ್ಯ ಕಾರಣಗಳಿಗಾಗಿ ದಾಖಲಾತಿಗಾಗಿ ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ದಾಖಲಾತಿ ಬಯಿಸಿದ ಅಭ್ಯರ್ಥಿಗಳಿಗೆ ನಾಲ್ಕನೇ ಸುತ್ತಿನ ದಾಖಲಾತಿ ಪ್ರಕ್ರಿಯೆಯಲ್ಲಿ ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಿದೆ.

7. ಜಿಲ್ಲಾ ವ್ಯವಸ್ಥಾಪಕ ಕೇಂದ್ರಗಳಲ್ಲಿ ಬಿ.ಇಡಿ ದಾಖಲಾತಿಗಾಗಿ ನಡೆದ ಮೂಲದಾಖಲೆಗಳ ಪರಿಶೀಲನಾ ವೇಳೆಯಲ್ಲಿ ಪರಿಶೀಲನಾಧಿಕಾರಿಗಳು ಪರಿಶೀಲಿಸಿದಂತೆ ಪದವಿ/ಅಥವಾ ಸ್ನಾತಕ ಪದವಿ ಅಂಕಗಳು ವ್ಯತ್ಯಾಸವಾಗಿ ದಾಖಲಾತಿಯಾಗದಿರುವ ಅಭ್ಯರ್ಥಿಗಳಿಗೆ ನಾಲ್ಕನೇ ಸುತ್ತಿನಲ್ಲಿ ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಿದೆ.

ಕ್ರ.ಸಂ.01 ರಿಂದ 07 ರವರೆಗಿನ ಅಭ್ಯರ್ಥಿಗಳು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ Seat Matrix ಅನ್ನು ಪರಿಶೀಲಿಸಿಕೊಂಡು, ವಿವಿಧ ಕಾಲೇಜುಗಳಲ್ಲಿ ತಮಗೆ ಅನ್ವಯವಾಗುವಂತೆ ಲಭ್ಯವಿರುವ ಸೀಟುಗಳಿಗೆ ನಿಮ್ಮ User ID ಮತ್ತು Password ಮೂಲಕ ಮತ್ತೊಮ್ಮೆ ಲಾಗಿನ್ ಆಗಿ ಆನ್‌ಲೈನ್ ಅರ್ಜಿಯಲ್ಲಿ ದಿನಾಂಕ:04-02-2023 ಮತ್ತು 07-02-2023 ಈ ಎರಡು ದಿನಗಳಲ್ಲಿ ಕಾಲೇಜು/ಸಂಸ್ಥೆಯ ಮರುಆದ್ಯತೆಯನ್ನು(*Option Entry*/Institution choice) ನಮೂದಿಸುವುದು. ಈ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ತಮ್ಮ ಮೆರಿಟ್ ಮತ್ತು ರೋಸ್ಟರ್ ಅನ್ವಯ ಪ್ರಕಟಿಸಲಾದ Seat Matrix ನಂತೆ ಸೀಟು ಲಭ್ಯವಿರುವ ಕಾಲೇಜುಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮರು ಆಧ್ಯತೆಯನ್ನು ನೀಡುವುದು. (ಮರುಆಧ್ಯತೆಯನ್ನು ಸೀಟು ಲಭ್ಯವಿರುವ ಎಲ್ಲಾ ಕಾಲೇಜುಗಳಿಗೆ ನೀಡಬಹುದು....ಕಾಲೇಜುಗಳಿಗೆ ಆಧ್ಯತೆ ನೀಡುವ ಸಂಬಂಧ ಯಾವುದೇ ಮಿತಿಯನ್ನು ನಿಗದಿಗೊಳಿಸಿರುವುದಿಲ್ಲ). ಈ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜುಗಳಿಗೆ ಮರು ಆಧ್ಯತೆಯನ್ನು ನಮೂದಿಸುವುದು. ಕಡಿಮೆ ಸಂಖ್ಯೆಯ ಕಾಲೇಜುಗಳಿಗೆ ಆಧ್ಯತೆ ನೀಡಿ ಕಾಲೇಜು ಹಂಚಿಕೆಯಾಗದಿದ್ದಲ್ಲಿ ಅಭ್ಯರ್ಥಿಗಳೇ ನೇರ ಜವಾಬ್ದಾರರಾಗಿರುತ್ತಾರೆ. ಆದ್ಯತೆ ನೀಡಲು ಇದು ಕೊನೆಯ ಅವಕಾಶವಾಗಿರುತ್ತದೆ.

**ಕೆಳಕಂಡ ಅಭ್ಯರ್ಥಿಗಳಿಗೆ ಮೂರನೇ ಮತ್ತು ನಂತರದ ಸುತ್ತಿನ ದಾಖಲಾತಿ ಪಕ್ರಿಯೆಗೆ ಅವಕಾಶವಿರುವುದಿಲ್ಲ.**

1. ಅಭ್ಯರ್ಥಿಯು ನೀಡಿರುವ ಆಧ್ಯತೆಯಂತೆ (*Option Entry*/Institution choice) ಮೊದಲನೇ ಸುತ್ತಿನಲ್ಲಿ ಕಾಲೇಜು ಹಂಚಿಕೆಯಾಗದೇ ಹೆಸರಿನ ಮುಂದೆ ** ಗುರುತು ನಮೂದಾಗಿದ್ದು, ಎರಡನೇ ಪಟ್ಟಿಯಲ್ಲಿ ಕಾಲೇಜು ಹಂಚಿಕೆಯಾಗಿದ್ದು, ದಾಖಲಾತಿ ಪಡೆಯದೇ ಇರುವ ಅಭ್ಯರ್ಥಿಗಳು.
2. ಅಭ್ಯರ್ಥಿಯು ನೀಡಿರುವ ಆಧ್ಯತೆಯಂತೆ (*Option Entry*/Institution choice) ಮೊದಲನೇ ಸುತ್ತಿನಲ್ಲಿ ಕಾಲೇಜು ಹಂಚಿಕೆಯಾಗಿದ್ದು, ದಾಖಲಾತಿ ಪಡೆಯದಿರುವ ಹಾಗೂ ಎರಡನೇ ಸುತ್ತಿನಲ್ಲಿ ಕಾಲೇಜು ಹಂಚಿಕೆಯಾಗದೇ ಹೆಸರಿನ ಮುಂದೆ ** ಗುರುತು ನಮೂದಾಗಿರುವ ಅಭ್ಯರ್ಥಿಗಳು.
3. ಮೂರನೇ ಸುತ್ತಿನಲ್ಲಿ ಕಾಲೇಜು ಸಹಿತ ಸೀಟು ಹಂಚಿಕೆಯಾಗಿ ಕಾಲೇಜಿಗೆ ದಾಖಲಾಗದ ಅಭ್ಯರ್ಥಿಗಳು.

## ನಾಲ್ಕನೇ ಸುತ್ತಿನ ದಾಖಲಾತಿಗೆ ಸೀಟು ಹಂಚಿಕೆ ಬಯಸಿ, ಕಾಲೇಜುಗಳಿಗೆ ಮರುಆಧ್ಯತೆ ನೀಡುವ ಅಭ್ಯರ್ಥಿಗಳು ಗಮನಿಸಬೇಕಾದ ಅಂಶಗಳು

1. ಕೆಲವು ಅಭ್ಯರ್ಥಿಗಳು ಹೆಚ್ಚಿನ ಮೆರಿಟ್ ಹೊಂದಿರುತ್ತಾರೆ ಆದರೆ ಕಾಲೇಜಿಗೆ ಆದ್ಯತೆ ನೀಡುವಾಗ ತಾನು ದಾಖಲಾತಿ ಬಯಸುವ ಕಾಲೇಜುಗಳನ್ನು ಕ್ರಮಾನುಗತವಾಗಿ ನೀಡದೇ ಅಂದಾಜಿನ ಆಧಾರದಲ್ಲಿ ನೀಡಿರುತ್ತಾರೆ.

   **ಉದಾಹರಣೆ:–** ಹೆಚ್ಚಿನ ಮೆರಿಟ್ ಹೊಂದಿರುವ ಒಬ್ಬ ಅಭ್ಯರ್ಥಿಯು X ಕಾಲೇಜಿಗೆ ದಾಖಲಾತಿ ಬಯಸಿರುತ್ತಾನೆ. ಆದರೆ ಮೊದಲ ಆಧ್ಯತೆಯಾಗಿ Y ಕಾಲೇಜಿಗೆ ನೀಡಿ ಆನಂತರ X ಕಾಲೇಜಿಗೆ ಆಧ್ಯತೆ ನೀಡಿರುತ್ತಾನೆ. ಇದರಿಂದ ಅವನಿಗೆ ಮೆರಿಟ್ ಮತ್ತು ರೋಸ್ಟರ್ ಅನ್ವಯ X ಕಾಲೇಜಿನಲ್ಲಿ ಸೀಟು ಸಿಗುವ ಅವಕಾಶವಿದ್ದರೂ ಸಿಗುವುದಿಲ್ಲ. ಆದರೆ ಈತನ ಮೆರಿಟ್ ಮತ್ತು ರೋಸ್ಟರ್‌ಗೆ Y ಕಾಲೇಜಿನಲ್ಲಿ ಸೀಟು ದೊರೆಯುವುದಿಲ್ಲ. ಕಾರಣ ಈತನಿಗಿಂತ ಹೆಚ್ಚು ಮೆರಿಟ್ ಇರುವ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ Y ಕಾಲೇಜಿಗೆ Option Entry /Institution Choice ಆದ್ಯತೆ ನೀಡಿರುತ್ತಾರೆ.

2. ಕೆಲವು ಅಭ್ಯರ್ಥಿಗಳು ಕಡಿಮೆ ಸಂಖ್ಯೆಯ ಕಾಲೇಜಿಗಳಿಗೆ ಆಧ್ಯತೆ ನೀಡಿರುತ್ತಾರೆ. ಇದರಿಂದ ಅಭ್ಯರ್ಥಿಗೆ ಕಾಲೇಜು ಹಂಚಿಕೆಯಾಗಿರುವುದಿಲ್ಲ. ಇದರಿಂದ ಅಂತಹ ಅಭ್ಯರ್ಥಿಗೆ ಈ ಹಂತದಲ್ಲಿ ತಾನು ಬಯಸುವ ಕಾಲೇಜಿಗೆ ಮೆರಿಟ್ ಮತ್ತು ರೋಸ್ಟರ್ ಅನ್ವಯ ಸೀಟು ಸಿಗುವ ಅವಕಾಶವಿದ್ದರೂ ಮತ್ತೊಬ್ಬ ಅಭ್ಯರ್ಥಿಗೆ ಆ ಕಾಲೇಜಿನಲ್ಲಿ ಸೀಟು ಹಂಚಿಕೆಯಾಗಿರುತ್ತದೆ.

3. ಹೆಚ್ಚಿನ ಮಾಹಿತಿಗಾಗಿ ದಿನಾಂಕ:05–01–2023 ರಂದು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ **"2022–23ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸೂಚನೆಗಳು"** ಇದನ್ನು ಗಮನಿಸುವುದು.

**ಸಹಿ/–**

ಆಯುಕ್ತರು

ಸಾರ್ವಜನಿಕ ಶಿಕ್ಷಣ ಇಲಾಖೆ